ಕೊಡುಗೆ ಈ ಖ್ಯಾತಿ ಪಟ್ಟಿಯಲ್ಲಿದೆ. ಸತ್ಯದೇವ್ ದುಬೆ ನಿರ್ದೇಶಿಸಿದ 'ಹಯವದನ'ದಲ್ಲಿ ಅಮರೀಶ್ ಪುರಿ ಮತ್ತು ಅಮೋಲ್ ಪಾಲೇಕರ್ ಅಭಿನಯಿಸಿದ ಪ್ರಥಮ ಪ್ರಯೋಗವನ್ನು ನಾನು ಮುಂಬಯಿಯಲ್ಲಿ ನೋಡಿದ್ದೇನೆ. ಬಹುಶಃ ಅಮೋಲ್ ಪಾಲೇಕರ್ ಅವರ ಫಿಲ್ಮ್ ಕರಿಯರ್ ಆರಂಭವಾದದ್ದೇ ಇಲ್ಲಿಯ ಅಭಿನಯದ ನಂತರ.

ತಮ್ಮ ತಂದೆಯಂತೆ ಗಿರೀಶರಿಗೆ ದೇವರಲ್ಲಿ ನಂಬಿಕೆ ಇರಲಿಲ್ಲ. ಜನರನ್ನು ಜಾತಿಗಳಲ್ಲಿ ವಿಭಜಿಸುವುದು ಅವರಿಗೆ ಇಷ್ಟವಿರಲಿಲ್ಲ. ಭಾರತವು ಧರ್ಮನಿರಪೇಕ್ಷ ರಾಷ್ಟ್ರವಾಗಬೇಕು ಎನ್ನುತ್ತಿದ್ದರು. ತಮ್ಮ ಮದುವೆಯ ಸಂದರ್ಭದಲ್ಲಿಯೂ ಅವರು ಈ ಬಗ್ಗೆ ಯೋಚಿಸಿರಲಿಲ್ಲ. "ಸರಸ್ವತಿಯನ್ನು ನೋಡಿದ್ದೆ, ಪ್ರೀತಿಸಿದ್ದೆ, ಮೆಚ್ಚಿದ್ದೆ, ಮದುವೆಯಾದೆ, ಅಷ್ಟೆ!" ಎಂದು ಸರಳವಾಗಿ ಹೇಳಿದ್ದರು; "ಸರಸ್ವತಿಯ ತಂದೆ ಕೊಡಗು ಭಾಷೆ ಮಾತಾಡುವ ಕರ್ನಾಟಕದ ಕೊಡಗರು, ತಾಯಿ ಗುಜರಾತೀ, ಕಚ್ಛೀ ಮಾತಾಡುವ ಪಾರ್ಸಿ. ಪ್ರೀತಿಸಿ, ಮದುವೆ ಮಾಡಿಕೊಳ್ಳಲು ನಿರ್ಧರಿಸಿದ ನಂತರ ಪ್ರೀತಿಯೇ ಸರ್ವಸ್ವ. ಅವಳು ಯಾವ ಭಾಷೆ, ಜಾತಿ, ಧರ್ಮದವಳಾಗಿದ್ದರೂ ಅದು ನನಗೆ ಅಡ್ಡಿಯಾಗದ ವಿಷಯ," ಎಂದು ಸ್ಪಷ್ಟವಾಗಿ ಹೇಳಿದ್ದರು. ಗಿರೀಶರು ಕೇವಲ ಮಾನವೀಯ ಸಂಬಂಧಗಳನ್ನು ಗೌರವಿಸುತ್ತಿದ್ದರು. ವಿವಾಹಪೂರ್ವದ ದಿನಗಳಲ್ಲಿ ಅವರ ಜೀವನದಲ್ಲಿಯೂ ಕೆಲವು ಆಸಕ್ತಿಯ ಕ್ಷಣಗಳು, ಹೊರಸಂಪರ್ಕಗಳು ಬಂದಿದ್ದಿರಬಹುದು. ಅವರಂಥ ಸ್ಫುರದ್ರೂಪಿ, ಬುದ್ಧಿವಂತ, ಕಲಾವಿದ, ಬಹುಭಾಷಾವಿದ, ಜನಪ್ರಿಯ, ಮಾತುಗಾರ, ಉದಾರ ವ್ಯಕ್ತಿಯ ಜೀವನದಲ್ಲಿ ಇಂಥ ಪ್ರಣಯ, ಸಂಬಂಧಗಳು ಖಂಡಿತವಾಗಿಯೂ ಬಂದಿರಬಹುದು; ಈ ಬಗ್ಗೆ ನಾನು ಕೇಳಿದಾಗ ಗಿರೀಶ ಈ ಸಂಗತಿಯನ್ನು ನಿರಾಕರಿಸಿರಲಿಲ್ಲ. ಧಾರವಾಡದಲ್ಲಿದ್ದಾಗಿನ ಅವರ ಯೌವನದ ದಿನಗಳನ್ನು ಕುತೂಹಲದಿಂದ ಗಮನಿಸುತ್ತಿದ್ದ ನನಗೆ ಅವರ ತೇಲುನಗು ಬಹಳಷ್ಟು ಹೇಳಿತು. ಆದರೆ ವಿವಾಹದ ನಂತರ ಇಂಥ ವಿಷಯಗಳ ಬಗ್ಗೆ ಅವರು ಸ್ಪಷ್ಟತೆ, ನಿಖರತೆ ಹೊಂದಿದ್ದರು. ಬಾಲ್ಯದಲ್ಲಿ ತಮ್ಮ ಮನೆ ಮತ್ತು ಸಂಬಂಧಿಕರಲ್ಲಿ ಸಮವಯಸ್ಕರಾಗಿದ್ದ ನಾಲ್ಕಾರು ಹುಡುಗಿಯರ ಕೂಡ ಆಡಿ ಬೆಳೆದ ಗಿರೀಶರಿಗೆ ಹೆಣ್ಣಿನ ಬಗ್ಗೆ ಸಂಕೋಚ ಅಥವಾ ಭಯವೆಂಬುದು ಇರಲಿಲ್ಲ. ಹೆಣ್ಣು ಗಂಡಿನ ಸಂಬಂಧಗಳನ್ನು ಸಹಾನುಭೂತಿಯಿಂದ ನೋಡಬೇಕು ಎನ್ನುತ್ತಿದ್ದರು. "ನಮ್ಮ ಸಾಹಿತ್ಯಕೃತಿಗಳಲ್ಲಿ ಕೂಡ ಯಾವುದೇ ಒಂದು ಪಂಥ ಅಥವಾ ವಿಚಾರಧಾರೆಯ ಚಿತ್ರಣಕ್ಕೆ ಪಾತ್ರಗಳನ್ನು ಬಳಸುವ ಯೋಚನೆ ಲೇಖಕನಾದವನು ಮಾಡಬಾರದು" ಎನ್ನುತ್ತಿದ್ದರು. ಆದರೂ ಗಿರೀಶರ ನಾಟಕಗಳಲ್ಲಿ ಅವರ ಪೂರ್ವಜೀವನದ ಕೆಲವು ವ್ಯಕ್ತಿಗಳ ನೆರಳು ಕಾಣುವುದನ್ನು ಅವರನ್ನು ಸಮೀಪದಿಂದ ಬಲ್ಲ ಕೆಲವರು ಗುರುತಿಸಬಹುದಾಗಿದೆ. ತಮ್ಮ ಜೀವನದಲ್ಲಿ ಬಂದಿರಬಹುದಾದ ಪ್ರಣಯ ಪ್ರಸಂಗಗಳನ್ನು ನಾಟಕೀಯವಾಗಿ ಬಳಸಿಕೊಂಡಿದ್ದಾರೆ. ಅಮೆರಿಕಾದಲ್ಲಿ ಕಂಡ ಒಂದು ವಾಸ್ತವ ಘಟನೆಯನ್ನು ಆಧರಿಸಿ ಬರೆದ 'ಅಂಜುಮಲ್ಲಿಗೆ'ಯ ಕಥೆ ಮತ್ತು ಅದರಲ್ಲಿಯ ಒಂದು ಪಾತ್ರ ಸ್ವತಃ ಗಿರೀಶರೇ ಎಂಬುದನ್ನು ಸಹಜವಾಗಿ ಗುರುತಿಸಬಹುದು.

ಗಿರೀಶ ಜೀವನದ ಬಗ್ಗೆ ತುಂಬ ಆಶಾವಾದಿಯಾಗಿದ್ದರು. ದೊಡ್ಡ ದೊಡ್ಡ ನಗರಗಳಲ್ಲಿ ದೊಡ್ಡವರ ಸಂಪರ್ಕದಲ್ಲಿಯೇ ಬೆಳೆದಿದ್ದರಿಂದ, ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಹೊಂದಿದ್ದ ತಂದೆಯ ಕಾರಣದಿಂದ ಗಿರೀಶರಿಗೆ ಗ್ರಾಮೀಣ ಭಾರತದ ಸಂಪರ್ಕ, ಪರಿಚಯ ಅಷ್ಟಾಗಿ ಬಂದಿರಲಿಲ್ಲ. ಬರವಣಿಗೆಯಲ್ಲಿ ನಾಟಕದಿಂದ ನಾಟಕಕ್ಕೆ ಭಾಷೆಯನ್ನು ಪ್ರಯೋಗಕ್ಕೆ ಒಡ್ಡುತ್ತ ಬಂದಿದ್ದರೂ, ಮಾತನಾಡುವಾಗ ಮಾತ್ರ ಗಿರೀಶರು, ಗ್ರಾಂಥಿಕ ಭಾಷೆಯನ್ನು ಬಳಸುವ ಬದಲು ಯಾವಾಗಲೂ ಧಾರವಾಡದ ಅಪ್ಪಟ ಲೋಕಾರೂಢಿ ಭಾಷೆಯನ್ನೇ ಬಳಸುತ್ತಿದ್ದರು. ಅಂಥ ಭಾಷೆಯನ್ನೇ ಬರೆಯುವ ಹಂಬಲವೂ ಅವರಿಗಿತ್ತು. 'ತಲೆದಂಡ' ನಾಟಕದಲ್ಲಿ ಸ್ವಲ್ಪ ಮಟ್ಟಿಗೆ ಆ ಇಚ್ಛೆಯನ್ನು ಈಡೇರಿಸಿಕೊಳ್ಳಲು ಯತ್ನಿಸಿದ್ದಾರೆ. ಕನ್ನಡದಲ್ಲಿ ಪತ್ರ ಬರೆಯುವಾಗ, ಸಹಿ ಮಾಡುವಾಗ, ಆಟೊಗ್ರಾಫ್ ಕೊಡುವಾಗ ಯಾವಾಗಲೂ ಗಿರೀಶ ಕಾರ್ನಾಡ ಎಂದೇ ಬರೆಯುತ್ತಿದ್ದರು. ಧಾರವಾಡದ ಕಡೆಯವರು ಬರೆಯುವ ಸ್ವರಾಂತ ಕನ್ನಡವೇ ಅವರ ಸ್ವರವಾಗಿತ್ತು; ಬೇರೆ ಕಡೆಯವರು ಬರೆಯುವ,